(ಶ್ರೀ ಸಿದ್ದಯ್ಯ ಅಲಿಯಾಸ್ ಕುನ್ನಯ್ಯನವರು.)

ಮಾನ್ಯ ರೆವಿನ್ಯೂ ಮಂತ್ರಿಗಳು ದಯವಾಡಿಸಿದ್ದಾಗ್ಗೆ ಅಲ್ಲಿ ಕಾಡಿನಲ್ಲಿ ಮರಗಳಿಲ್ಲದ ಬಯಲಾಗಿರತಕ್ಕಂಥ ಪ್ರದೇಶವನ್ನು ವ್ಯವಸಾಯಕ್ಕೆ ಬಿಡಿಸಿಕೊಡುತ್ತೇವೆಂದು ಅಶ್ವಾಸನೆ ಮಾಡಿದ್ದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಹುಶಃ ನಿನ್ನೆ ಕಾಲದಲ್ಲಿ ಹಾಗೆ ಆಗಿರಬಹುದು.

ಶ್ರೀ ಜಿ. ಶಿವಪ್ಪನವರು (ಹೊಳಲ್ಕೆರೆ).—ಸರ್ಕಾರದವರು ಈ ಈಚಲು ವನಗಳನ್ನು ವ್ಯವಸಾಯಕ್ಕೆ ಕೊಡುವಾಗ ಯಾವ ನೀತಿಯನ್ನು ಅನುಸರಿಸುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸರ್ಕಾರದವರು ಈ ಬಗ್ಗೆ ಒಂದು ಸಮಿತಿ ನೇಮಕಮಾಡಿದ್ದಾರೆ. ಆ ಸಮಿತಿಯವರ ಶಿಫಾರಸುಗಳ ಮೇರೆಗೆ ಜಮೀನನ್ನು ವಿಲೇವಾರಿ ಮಾಡಲಾಗುತ್ತದೆ. ಹಾಗೆ ವಿಲೇವಾರಿ ಗಾಗಿ ಜಮೀನುಗಳನ್ನು ರೆವಿನ್ಯೂ ಇಲಾಖೆಗೆ ಬಿಟ್ಟು ಕೊಡಲಾಗುತ್ತದೆ.

ಶ್ರೀ ಜಿ. ಶಿವಪ್ಪನವರು.—ಅವರು ಮಾಡಿದ ಶಿಫಾರಸುಗಳನ್ನೇ ತಾವು ಒಪ್ಪುತ್ತೀರಾ ?

Mr. SPEAKER.—It is already explained.

ಶ್ರೀ ಜಿ. ಪುಟ್ಟಸ್ವಾಮಿಯವರು.—ಆ ಸಮಿತಿಯಲ್ಲಿ ರತಕ್ಕ ಸದಸ್ಯರು ಯಾರು ಯಾರು ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಜಿ. ಪುಟ್ಟಸ್ವಾಮಿಯವರು.—ಈ ಈಚಲು ವನದಲ್ಲಿ ಇನ್ನು ವ್ಯವಸಾಯಕ್ಕೆ ಹೆಚ್ಚಾಗಿ ಜಮೀನನ್ನು ಬಿಟ್ಟುಕೊಡಲು ಸಾಧ್ಯವಿಲ್ಲವೆಂದು ತಾವು ಪ್ರೇಳಿರುವ ಕಾರಣ, ಇನ್ನೂ ಅನೇಕ ರೈತರಿಗೆ ವ್ಯವಸಾಯಕ್ಕೆ ಜಮೀನಿಲ್ಲದ ಪ್ರಯುಕ್ತ ಕಳಸಾಪುರದ ಕಾವಲುನಲ್ಲಿರ ತಕ್ಕ ಜಮೀನುಗಳನ್ನು ಬಿಡಿಸಿಕೊಡುವಿರಾ ?

ಅಧ್ಯಕ್ಷರು.—ಈಗ ಹಾಲಿ ಇರತಕ್ಕ 37,271 ಎಕರೆ, 15 ಗುಂಟೆ ಜಮೀನೆಲ್ಲಾ ಮುಗಿಯಲಿ. ಅನಂತರ ಬೇರೆ ಪ್ರಶ್ನೆ.

Free Grant of land to Harijans and Banajars.

Q.—371. **Sri S. R. NAGAPPA SETTY** (Shimoga):—

Will the Government be pleased be state.—

(*a*) the extent of lands granted free of cost to Harijans and Banajars in each taluk from the year 1942-43;

(*b*) whether these lands, after they were brought under cultivation by the persons who obtained them, at their own expense have been granted to others as per orders of Government?

A—**Sri Kadidal MANJAPPA** (Minister for Revenue and Public Works).—

(*a*) 72,224 acres. Talukwar details are not readily available.

(*b*) No such instances are brought to the notice of Government.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಮುಫ್ತಾಗಿ ಜಮೀನುಕೊಟ್ಟ ಮೇಲೆ ರೈತರಿಂದ ಮತ್ತೆ ಪುನಃ ಹಿಂದಕ್ಕೆ ಪಡೆಯುವುದಕ್ಕೆ ಅವಕಾಶವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಗ್ರಾಂಟಿನ ಪರತ್ರಿಗನುಸಾರವಾಗಿ ಜಮೀನನ್ನು ಕೊಟ್ಟು ಪುನಃ ಸರ್ಕಾರಕ್ಕೆ ಸೇರಿಸಿಕೊಳ್ಳಬಹುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಅದರಲ್ಲಿರುವ ಷರತ್ತುಗಳೇನು ?

Mr. SPEAKER.—That is embodied in the Government order. The Hon'ble Member is not expected to put such supplementaries.

Releasing certain Survey Numbers for cultivation

Q.—246. **Sri G. PUTTASWAMY** Chikmagalur—Mudigere — Scheduled Castes):—

Will the Government be pleased to state.—

whether it is under their active consideration to release S. No. 43 of Jogannanakere in Mudigere Taluk and S. No. 94 of Lakhya in Chikmagalur Taluk, belonging to the Forest Department ?

A—**Sri T. CHANNIAH** (Minister for Public Health and Local Self-Government).—

An extent of 5 acres of land out of Survey No. 43 of Jogannanakere has been leased out for cardamom cultivation during 1951. The question of releasing the remaining area will be examined. As regards Survey No. 94 of Lakhya Village, Chikmagalur Taluk, there is no proposal for releasing lands.

ಶ್ರೀ ಜಿ. ಪುಟ್ಟಸ್ವಾಮಿಯವರು.—ಜೋಗಣ್ಣನಕೆರೆ ಗ್ರಾಮದಲ್ಲಿರುವ 43ನೆಯ ಸರ್ವೆ ನಂಬರಿನ ಜಮೀನನ್ನು ಸಾಗುವಳಿಗೆ ಕೊಡುವ ವಿಚಾರವನ್ನು ಎಷ್ಟು ಕಾಲದಿಂದ ಪರಿಶೀಲಿಸಲಾಗುತ್ತಿದೆ ?

ಶ್ರೀ ಟಿ. ಚನ್ನಯ್ಯನವರು.—1951ನೆಯ ಇಸವಿಯಿಂದ.

ಶ್ರೀ ಜಿ. ಪುಟ್ಟಸ್ವಾಮಿಯವರು.—ಅದಕ್ಕೆ ಇನ್ನೂ ಎಷ್ಟು ಕಾಲ ಬೇಕಾಗಬಹುದು ?

ಶ್ರೀ ಟಿ. ಚನ್ನಯ್ಯನವರು.—ಆ ಪ್ರದೇಶದಿಂದ ಈಗ ಅರ್ಜಿ ಬಂದರೆ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿಯವರು.—ಇದುವರೆಗೆ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯನವರು.—ಬಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಯವರು.—ಈಗ ಎಷ್ಟು ಬಂದಿವೆ ?

ಶ್ರೀ ಟಿ. ಚನ್ನಯ್ಯನವರು.—ಹೇಳುವುದಕ್ಕೆ ಸಾಧ್ಯವಿಲ್ಲ.